
ತರಂಗ @ 40
ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ನವೆಂಬರ್ 3, 2022
₹25

# ತರಂಗ




## ಕದಂಬರ ಕುಂಭದಲ್ಲಿ ಕನ್ನಡದ ಬಿಂಬ

## ಕಾಂಗ್ರೆಸ್ ಶಿಖರದಲ್ಲಿ ಕರ್ನಾಟಕದ ಖರ್ಗೆ








## ಕಡಲಾಚೆಯ ಕನ್ನಡ 'ಕಾವೇರಿ'

## ಕನ್ನಡ ಗಾದೆಗಳ ವಿಡಿಯೋ ಮೋಡಿ

ಸಂಭ್ರಮ

# ಕಡಲಾಚೆಯ ಕನ್ನಡ ರಾಯಭಾರಿ

# ಚಿನ್ನದಹಬ್ಬ ಆಚರಿಸಿದ 'ಕಾವೇರಿ'



*'ಕನ್ನಡ ಕಲಿಯೋಣ 'ಮಕ್ಕಳ ಪ್ರಸ್ತುತಿ.*

*ಕಾವೇರಿ ಸುವರ್ಣ ಮಹೋತ್ಸವದ ಲಾಂಛನ.*

❑ಶ್ರೀವತ್ಸ ಜೋಶಿ

**ಕನ್ನಡ ನೆಲದಿಂದ ಸಾವಿರಾರು ಮೈಲಿ ದೂರದಲ್ಲಿ ಕನ್ನಡದ ಜೀವನದಿಯ ಹೆಸರಿನಲ್ಲಿ ಕನ್ನಡಿಗರ ಸಮಾಗಮಕ್ಕೊಂದು ವೇದಿಕೆ ಬೇಕೆಂಬ ಸಂಕಲ್ಪದಲ್ಲಿ 1972ರಲ್ಲಿ ಅಸ್ತಿತ್ವಕ್ಕೆ ಬಂದ ಸಂಘಟನೆ–'ಕಾವೇರಿ', ಈ ವರ್ಷ ಸ್ವರ್ಣ ಸಂಭ್ರಮವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡಿದೆ. ಮಹಾನಗರದ ವಿವಿಧ ಭಾಗಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿರುವ ಕನ್ನಡಿಗರು ದುಡಿಮೆಯೊಂದಿಗೆ ನುಡಿನಲ್ಮೆಯೂ ಅತ್ಯಗತ್ಯವೆಂಬ ಆಶಯವನ್ನು ಈ 50 ವರ್ಷಗಳಲ್ಲಿ ತನ್ನ ಸಮಾಜಮುಖೀ ಕಾರ್ಯತತ್ಪರತೆ, ಸಾಹಿತ್ಯ–ಕಲಾಪ್ರತಿಭಾ ಪೋಷಣೆ, ಕೃತಿ ಪ್ರಕಟಣೆ, ಕನ್ನಡ ಕಲಿಕೆಗೆ ಪ್ರೋತ್ಸಾಹ ಮುಂತಾದ ರಚನಾತ್ಮಕ ಪ್ರಯತ್ನಗಳ ಮೂಲಕ ಸಾಕಾರಗೊಳಿಸುತ್ತ ಬಂದಿದೆ 'ಕಾವೇರಿ ಕನ್ನಡ ಸಂಘ'. ಕನ್ನಡದ ಪ್ರಗತಿಯೆಂದರೆ ಕನ್ನಡ ಸಂಸ್ಕೃತಿಯ ಸೊಗಡನ್ನು ಹಬ್ಬಿಸುವ ಮಹಾಯಜ್ಞ ಎಂಬ ಸಂದೇಶವನ್ನು ಹುಟ್ಟುನೆಲದ ಅಕ್ಷರಮಿತ್ರರಿಗೂ ತಲುಪಿಸುವಲ್ಲಿ ಕೃತಾರ್ಥವಾಗಿರುವ ಈ ಸಂಘಟನೆಯ ಹೊನ್ನಹಬ್ಬದ ಸಾರ್ಥಕ ಸಂಭ್ರಮವನ್ನು 'ತರಂಗ'ದ ಓದುಗರಲ್ಲಿ ಹಂಚಿಕೊಂಡಿದ್ದಾರೆ ಲೇಖಕರು.**

'ಕೊಡಗಿನ ಬ್ರಹ್ಮಗಿರಿಯಲ್ಲಿ ತಪಸ್ಸಿಗೆ ಕುಳಿತಿದ್ದ ಅಗಸ್ತ್ಯ ಮಹರ್ಷಿಯ ಕಮಂಡಲುವನ್ನು ಗಣೇಶನು ಕಾಗೆಯ ರೂಪದಲ್ಲಿ ಬಂದು ಕುಕ್ಕಿದಾಗ, ಅದರೊಳಗೆ ಅವಿತಿದ್ದ ಲೋಪಾಮುದ್ರೆಯು ಹೊರಬಂದು ಕಾವೇರಿ ನದಿಯಾಗಿ ಹರಿಯತೊಡಗಿದಳು. ಲೋಕಪಾವನೆ ದಕ್ಷಿಣದ ಗಂಗೆ ಎನಿಸಿದಳು...' ಅಂತೊಂದು ಜನಜನಿತ ಪುರಾಣ ಕಥೆ. ಅದು ಕನ್ನಡನಾಡಿನ ಜೀವನದಿ ಕಾವೇರಿ ಉಗಮವಾದ ಬಗೆ. ಅಮೆರಿಕಾದ ರಾಜಧಾನಿ ವಾಷಿಂಗ್ಟನ್ ಡಿಸಿ ಪ್ರದೇಶದಲ್ಲೊಂದು ಕನ್ನಡ ಸಂಘ ಇದೆ 'ಕಾವೇರಿ' ಎಂಬ ಹೆಸರಿನದು. ಇದರ ಉಗಮದ ಕಥೆಯೂ ಕುತೂಹಲಕಾರಿಯೇ! ಸಂಘದ ಪ್ರಪ್ರಥಮ ಅಧ್ಯಕ್ಷೆ ವಿಮಲಾ ಚನ್ನಬಸಪ್ಪ ಅವರ ಮಾತಿನಲ್ಲೇ ಕೇಳುವುದಾದರೆ ಆ ಕಥೆ ಹೀಗಿದೆ:

'1950ರ ದಶಕದ ಸುಮಾರಿಗೆ ಕೆಲವೇ ಕೆಲವು ಭಾರತೀಯರು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಬರುತ್ತಿದ್ದರು, ಬಹುಮಟ್ಟಿಗೆ ಉನ್ನತ ಶಿಕ್ಷಣಕ್ಕಾಗಿ. ಹಾಗೆ ಬಂದ ಕೆಲವರು ಇಲ್ಲಿಯೇ ನೆಲೆಸುತ್ತಿದ್ದರು. ಮುಂದಿನೆರಡು ದಶಕಗಳಲ್ಲಿ ಹೆಚ್ಚು ಜನ ಭಾರತೀಯರು, ಅದರಲ್ಲಿ ಕೆಲವರು ಉದ್ಯೋಗವನ್ನೂ ಪಡೆದು, ಅಮೆರಿಕಾಗೆ ಬಂದರು. ಆದಾಗ್ಯೂ ಕನ್ನಡಿಗರ ಸಂಖ್ಯೆ ಕಡಿಮೆಯೇ ಇತ್ತು. ರಾಜಧಾನಿ ವಾಷಿಂಗ್ಟನ್ ಡಿಸಿ ಪ್ರದೇಶದಲ್ಲಿ ನನಗೆ ಗೊತ್ತಿದ್ದ ಮಟ್ಟಿಗೆ, ನಾನು ಮತ್ತು ನನ್ನ ಪತಿ ಡಾ| ಕೆಂಕೆರೆ ಚನ್ನಬಸಪ್ಪ, ಕಾಂತಾ ಮತ್ತು ಗಂಗಾಧರ ಕೋರಿ, ನಿರ್ಮಲಾ ಮತ್ತು ಮಾಗಲ್ ರಾವ್, ಭಾರತಿ ಮತ್ತು ಭೋಗಾರಾಂ ಸೆಟ್ಟಿ–ಇಷ್ಟೇ ಮಂದಿ ಕನ್ನಡಿಗರಿದ್ದೆವು. ಬೇರೆ ಕೆಲವರೂ ಇರಬಹುದೇ ಎಂಬ ಕುತೂಹಲದಿಂದ ಟೆಲಿಫೋನ್ ಡೈರೆಕ್ಟರಿ ನೋಡಿ ಹೆಸರಿನಿಂದಲೇ ಅಂದಾಜು ಮಾಡಿ ಸಂಪರ್ಕಿಸುತ್ತಿದ್ದೆವು. ಹಾಗೆ ಕಂಡುಬಂದವರಲ್ಲಿ ಭಾಗ್ಯಾ ರಂಗಾಚಾರ್, ಎಸ್. ಕೃಷ್ಣಮೂರ್ತಿ, ಮಂದಾಕಿನಿ, ರಾಮ್ ಕುಲಕರ್ಣಿ ಮುಂತಾದವರಿದ್ದರು. ಮೊತ್ತಮೊದಲಿಗೆ, 1972ರಲ್ಲಿ ಸಂಕ್ರಾಂತಿ ಹಬ್ಬಕ್ಕೆ ನಮ್ಮ ಮನೆಯ ಬೇಸ್‌ಮೆಂಟ್‌ನಲ್ಲಿ ಎಲ್ಲರೂ ಸೇರಿದೆವು. ಪ್ರತಿಯೊಬ್ಬರೂ ಮಾಡಿ ತಂದಿದ್ದ ಅಡುಗೆಯನ್ನು ಎಲ್ಲರೂ ಸವಿದೆವು. ಆಮೇಲೂ ಬೇರೆಬೇರೆಯವರ ಮನೆಗಳಲ್ಲಿ ಆಗಾಗ 'ಪಾಟ್‌ಲಕ್ ಡಿನ್ನರ್' ಪಾರ್ಟಿಗಳನ್ನಿಟ್ಟುಕೊಳ್ಳುತ್ತಿದ್ದೆವು. ಆ ಸಂದರ್ಭದಲ್ಲೇ, ಬಾಲ್ಟಿಮೋರ್‌ನ ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದು ಮೇರಿಲ್ಯಾಂಡ್ ಪ್ರಾಂತ್ಯದ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬೆಳವಾಡಿ ಶಂಕರನಾರಾಯಣ ಎಂಬ ಕನ್ನಡಿಗರ ಪರಿಚಯವಾಯಿತು. ಅವರು ಈ ಪ್ರದೇಶದಲ್ಲೊಂದು ಕನ್ನಡಕೂಟವನ್ನು ಆರಂಭಿಸಬೇಕೆಂಬ ಮಹತ್ವಾಕಾಂಕ್ಷೆ ಇದ್ದವರು ಅಂತಲೂ ತಿಳಿದುಬಂತು. ನಮ್ಮೆಲ್ಲರ ಖುಷಿಗೆ ಪಾರವೇ ಇಲ್ಲ. ಶಾರದಾ ಮತ್ತು ಶಂಕರನಾರಾಯಣ ದಂಪತಿಯನ್ನು ನಮ್ಮದೊಂದು ವನಭೋಜನ ಕಾರ್ಯಕ್ರಮಕ್ಕೆ ಆಹ್ವಾನಿಸಿದೆವು. ಕನ್ನಡಕೂಟ ಸ್ಥಾಪನೆಯ ಬಗ್ಗೆ ಮಾತನಾಡಿದೆವು. ನನ್ನ ಪತಿ ಚನ್ನಬಸಪ್ಪ ಅವರು ಆಗ ಇಲ್ಲೊಂದು ಸಾಪ್ತಾಹಿಕ ರೇಡಿಯೋ ಕಾರ್ಯಕ್ರಮವನ್ನು ಭಾರತೀಯರಿಗಾಗಿ ನಡೆಸುತ್ತಿದ್ದರು. ಅದರಲ್ಲಿ ಪ್ರಕಟಣೆ ಮಾಡಿದರೆ ಈ ಪ್ರದೇಶದಲ್ಲಿ ನೆಲೆಸಿರುವ ಇನ್ನಷ್ಟು ಕನ್ನಡಿಗರನ್ನು ಆಕರ್ಷಿಸಬಹುದೆಂದು

# ಸುವರ್ಣಾಕ್ಷರ ಸಂಭ್ರಮ

'ಕಾವೇರಿ'ಯ ಸುವರ್ಣಮಹೋತ್ಸವ ಸಂದರ್ಭದಲ್ಲಿ ಬಿಡುಗಡೆಗೊಂಡ ಸ್ಮರಣಸಂಚಿಕೆ 'ಸುವರ್ಣಸಂಭ್ರಮ'. ಡಾ। ಮೈ. ಶ್ರೀ ನಟರಾಜ ಮತ್ತು ಡಾ। ರವಿ ಹರಪ್ಪನಹಳ್ಳಿ ಸಂಪಾದಕತ್ವದಲ್ಲಿ ಮೂಡಿ ಬಂದಿರುವ ಇದು ಒಂದು ಸಂಗ್ರಾಹ್ಯ ಗ್ರಂಥ. ಕರ್ನಾಟಕದ ಪ್ರತಿಭಾವಂತ ಕಲಾವಿದ ಬಾಗೂರು ಮಾರ್ಕಂಡೇಯ ರಚಿಸಿದ ಸುಂದರ ಮುಖಪುಟ. ಒಳಗಿನ ಹೂರಣವೂ ಸತ್ತ್ವಯುತ. 'ಕಾವೇರಿ'ಯ ಮಾಜಿ ಅಧ್ಯಕ್ಷರುಗಳೆಲ್ಲ ತಮ್ಮ ತಮ್ಮ ಸೇವಾ ವರ್ಷದ ಸಿಹಿ ನೆನಪುಗಳನ್ನು, ಅನುಭವ ಮತ್ತು ಕಲಿಕೆಗಳನ್ನು ಅಕ್ಷರಕ್ಕಿಳಿಸಿದ್ದಾರೆ. ಆ ದೃಷ್ಟಿಯಲ್ಲಿ ಇದೊಂದು ಚಾರಿತ್ರಿಕ ದಾಖಲೆ ಕೂಡ. ಇನ್ನೊಂದು ವಿಭಾಗ 'ದುಡಿದು ಮಡಿದವರು'- ಅಗಲಿರುವ ಕಾವೇರಿಗರಿಗೆ ಅಕ್ಷರ ರೂಪದ ಅಶ್ರುತರ್ಪಣ. ಬಹುಮಟ್ಟಿಗೆ ಆಯಾ ವ್ಯಕ್ತಿಗಳ ಕುಟುಂಬಸ್ಥರಿಂದಲೇ ಬರೆಸಿರುವುದು ಭಾವನಾತ್ಮಕವಾಗಿಸಿದೆ. ಕ್ರೀಡೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತಿತರ ಲಲಿತಕಲೆಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕಾವೇರಿಯ ಪ್ರತಿಭೆಗಳನ್ನು ಪರಿಚಯಿಸುವ ಒಂದು ವಿಭಾಗವೂ ಇದೆ. ವರ್ಷಗಳ ಹಿಂದೆ ಇಲ್ಲಿಗೆ ವಲಸೆ ಬರುವಾಗ ಬಟ್ಟೆಬರೆಯ ಎರಡು ಸೂಟ್‌ಕೇಸ್‌ಗಳನ್ನಷ್ಟೇ ತಂದವರು ಇಲ್ಲಿ ಸಂಪೂರ್ಣ ಪರಿಶ್ರಮದಿಂದ ಈಗ ಯಶಸ್ವಿ ಉದ್ಯಮಿಗಳಾಗಿರುವವರ ಪರಿಚಯ ಲೇಖನಗಳೂ ಇವೆ. ಅಂತೆಯೇ 'ಕಾವೇರಿ'ಯ ಯುವ ಸದಸ್ಯರ ಅನುಭವ ಕಥನಗಳೂ ಸಂಚಿಕೆಯ ಮೌಲ್ಯವರ್ಧಿಸಿವೆ.




*ಸುವರ್ಣಸಂಭ್ರಮ ಸ್ಮರಣ ಸಂಚಿಕೆಯ ಮುಖಪುಟ.*

ಸ್ಮರಣಸಂಚಿಕೆಗಳು, ಕನ್ನಡದಲ್ಲಿ ಸುದ್ದಿಪತ್ರಗಳ ಪ್ರಕಟಣೆ ವಿಷಯದಲ್ಲಿ ಕಾವೇರಿ ಸದಾ ಮುಂಚೂಣಿಯಲ್ಲಿದೆ. ಅಮೆರಿಕಾದಲ್ಲಿ ಪ್ರಕಟವಾದ ಕನ್ನಡ ಸುದ್ದಿಪತ್ರಗಳಲ್ಲಿ ಬಹುಶಃ 'ಕಾವೇರಿ'ಯ ಸುದ್ದಿಪತ್ರವೇ ಎಲ್ಲಕ್ಕಿಂತ ಮೊದಲುಹುಟ್ಟಿದ್ದು. ಮೊದಲಿಗೆ ಉಮಾ ರಾಜಶೇಖರ್ ಅವರ ಸುಂದರ ಕೈಬರಹದಲ್ಲಿ ಪ್ರಕಟ. ಮುಂದೆ ವಿಮಲಾ ಚನ್ನಬಸಪ್ಪ ಅವರ ಸಂಪಾದಕತ್ವದಲ್ಲಿ ಬೆರಳಚ್ಚಿನ ಪತ್ರಿಕೆ. ಆಮೇಲೆ ಡಾ। ಮೈ. ಶ್ರೀನಟರಾಜರ ಸಂಪಾದಕತ್ವದಲ್ಲಿ ಕರ್ನಾಟಕದಲ್ಲಿ ಅಚ್ಚುಮಾಡಿಸಿ ತರಿಸಿದ 'ತವರು', 'ಕವಲು', 'ಬೆಳ್ಳಿಬುಗ್ಗೆ' ಮುಂತಾದ ಹೆಸರಿನ ಸಂಚಿಕೆಗಳು, 2003ರಲ್ಲಿ ಸಂಜಯ ರಾವ್ ಅಧ್ಯಕ್ಷರಾಗಿದ್ದಾಗ ಪ್ರಕಟವಾದ 'ಭಾವನದಿ' ಸಂಚಿಕೆ, 'ಅಕ್ಕ' ವಿಶ್ವಕನ್ನಡ ಸಮ್ಮೇಳನ ಸಂದರ್ಭದಲ್ಲಿ ಹೊರತಂದ 'ಸುವರ್ಣವಾಹಿನಿ', 'ವಿಜ್ಞಾನವಾಹಿನಿ', 'ಕಥಾವಾಹಿನಿ' ಪುಸ್ತಕಗಳು... ಹೀಗೆ 'ಕಾವೇರಿ' ನಡೆಸಿದ ಅಕ್ಷರ ಪೋಷಣೆ ಗಣನೀಯವಾದದ್ದು. 1995ರಲ್ಲಿ ಕನ್ನಡಸಾಹಿತ್ಯ ಪರಿಷತ್ತಿಗೆ ಎರಡು ಲಕ್ಷ ರೂಪಾಯಿಗಳ ನಿಧಿಯೊಂದನ್ನು ಕೊಟ್ಟು ಕನ್ನಡ ಪುಸ್ತಕಗಳ ಪ್ರಕಾಶನಕ್ಕೆಂದೇ ಈ ಹಣವನ್ನು ಮುಡಿಪಾಗಿಟ್ಟಿರುವುದು 'ಕಾವೇರಿ' ಯ ದೊಡ್ಡ ಸಾಧನೆಗಳಲ್ಲೊಂದು. ಮೊದಲಬಾರಿಗೆ ಪುಸ್ತಕ ಬರೆದು ಪ್ರಕಟಿಸಲು ಕಷ್ಟಪಡುವ ಯೋಗ್ಯ ಯುವಕ-ಯುವತಿಯರನ್ನು ಗಮನದಲ್ಲಿಟ್ಟುಕೊಂಡು ಸ್ಥಾಪಿಸಿರುವ ಈ ನಿಧಿಯು ಅನೇಕ ಕಿರಿಯ ಬರಹಗಾರರಿಗೆ ನೆರವಾಗಿದೆ.




*ಸುವರ್ಣ ಮಹೋತ್ಸವ ಸಂಚಲನ ಸಮಿತಿ. (ಸಂಜಯ ರಾವ್, ಮಾದೇಶ ಬಸವರಾಜು, ನಾಗಶಂಕರ್, ಹರಿದಾಸ್ ಲಹರಿ, ಸುಧಾಕರ ಸರಸ್ವತೀಪುರ, ಶರ್ಮಿಳಾಮೂರ್ತಿ, ಡಿ.ಎಸ್.ರಾಜಶೇಖರ್, ಸತೀಶ ಬೆಳಗುತ್ತಿ, ಮೈತ್ರಿ ಜಯದೇವ್).*

ಆಲೋಚಿಸಿದೆವು. ಮಿಷಿಗನ್‌ನ ಆ್ಯನ್‌ಅರ್ಬರ್ ಯುನಿವರ್ಸಿಟಿ ಕ್ಯಾಂಪಸ್ಸಿನಲ್ಲಿ ಅದಾಗಲೇ 'ಪಂಪ' ಕನ್ನಡಕೂಟ ಆರಂಭಿಸಿದ್ದ ಅಧ್ವರ್ಯುಗಳು ನಮ್ಮ ಮಾರ್ಗದರ್ಶನಕ್ಕೆ ಬಂದರು. ಶಂಕರನಾರಾಯಣ, ಶ್ರೀಧರ್ ಮತ್ತು ರಾಜಶೇಖರ್ ಮುಂತಾದವರು ಅವರೊಡನೆ ಚರ್ಚಿಸಿ ಕೂಟದ ರೂಪುರೇಷೆ ನಿರ್ಮಿಸಿದರು. ಅದೇ ವರ್ಷ ದಸರಾ ಆಚರಣೆಗೆ ಬಾಲ್ಟಿಮೋರ್‌ನಲ್ಲಿ ಸೇರಿದೆವು. ಆ ಸಮಾರಂಭದಲ್ಲಿ ನಮ್ಮೊಡನಿದ್ದ ರಾಜಲಕ್ಷ್ಮೀ ಕೃಷ್ಣಮೂರ್ತಿ ಕೆಲವು ಕನ್ನಡಗೀತೆಗಳನ್ನು ಮಧುರವಾಗಿ ಹಾಡಿದ್ದರು. ದೇವಿ ಸರಸ್ವತಿಯ ಬಗ್ಗೆ ನಾನೂ ಒಂದು ಸ್ವರಚಿತ ಪದ್ಯವನ್ನು ಗಿಟಾರ್ ನುಡಿಸುತ್ತ ಹಾಡಿದ್ದೆ. ಆ ಪದ್ಯ 'ಕರುನಾಡ ಕವಿಗಳ ಕುಲದೇವಿಯೇ, ಹೊರಚೆಲ್ಲಿ ಹರಿಯಮ್ಮ ಕಾವೇರಿಯೇ...' ಎಂದು ಕೊನೆಗೊಂಡಿತ್ತು. ಪ್ರಾಸಕ್ಕಾಗಿ ಬರೆದಿದ್ದ ಆ ಸಾಲು, ಶಂಕರನಾರಾಯಣರ ಬಹುದಿನದ ಕನಸಾಗಿದ್ದ ಕನ್ನಡಕೂಟದ ಜನನಕ್ಕೆ ನಾಂದಿಯಾಯಿತು ಮತ್ತು 'ಕಾವೇರಿ' ಎಂಬ ಸುಂದರವಾದ ಹೆಸರನ್ನೂ ಕೊಟ್ಟಿತು! ಮುಂದೆ ದೀಪಾವಳಿ ಸಮಯದಲ್ಲಿ ಇನ್ನೊಂದು ಸಮಾರಂಭ ಆಯೋಜಿಸಿದೆವು. ರೇಡಿಯೊದಲ್ಲಿ ಪ್ರಚಾರ ಮಾಡಿದೆವು. ನನಗೆ ನೆನಪಿರುವಂತೆ ಸುಮಾರು 150 ಜನ ಕನ್ನಡಿಗರು ಸೇರಿದ್ದೆವು. ಸಮೂಹಗಾನ, ದೀಪನೃತ್ಯ, ಬುಡುಬುಡಿಕೆ ಪ್ರಹಸನ ಇತ್ಯಾದಿ ಮನೋರಂಜನೆ ಇತ್ತು. ಕಾವೇರಿ ನಮ್ಮ ಕನ್ನಡಕೂಟ ಎಂಬ ಅಭಿಮಾನ ಎಲ್ಲರಲ್ಲೂ ಚಿಗುರತೊಡಗಿತು.

## ಬಂಗಾರದ ಬೆಳಕಿನಲ್ಲಿ ಕನ್ನಡತನದ ಹೊಳಪು

ಐವತ್ತು ವರ್ಷಗಳ ಹಿಂದೆ ಹಾಗೆ ಚಿಗುರತೊಡಗಿದ ಕಾವೇರಿ ಕನ್ನಡಸಂಘ ಈಗ ಬೃಹತ್ ಆಲದ ಮರದಂತೆ ಬೆಳೆದು ನಿಂತಿದೆ. ಮೊನ್ನೆ ಆಗಸ್ಟ್ 26, 27ರಂದು ಅತ್ಯಂತ ವಿಜೃಂಭಣೆಯಿಂದ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ವಿಮಲಾ ಚನ್ನಬಸಪ್ಪ ಈಗ ನಮ್ಮೊಂದಿಗಿಲ್ಲ. ಬೆಳವಾಡಿ ಶಂಕರನಾರಾಯಣ ಸಹ ಕೆಲವು ತಿಂಗಳ ಹಿಂದೆ ಬೆಂಗಳೂರಿನಲ್ಲಿ ದೈವಾಧೀನರಾದರಂತೆ. ಕಾವೇರಿಯ ಸುವರ್ಣಸಂಭ್ರಮವನ್ನು ಕಣ್ತುಂಬಿಸಿಕೊಳ್ಳಲು ಅವರಿಬ್ಬರೂ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

1970ರ ದಶಕದಲ್ಲಿ ಅಮೆರಿಕಾದ ದೊಡ್ಡ ನಗರಗಳಲ್ಲೂ ಕನ್ನಡಿಗರ ಸಂಖ್ಯೆ ಕಡಿಮೆಯೇ ಇತ್ತು. ಆಗ ಪರಸ್ಪರ ಭೇಟಿಯಾಗಿ ಊಟ-ತಿಂಡಿ ಉಭಯ ಕುಶಲೋಪರಿ ವಿನಿಮಯ ಮತ್ತು ಕಾಲಕ್ಷೇಪಕ್ಕಾಗಿ ಹಾಡುಹಸೆ-ಇದಿಷ್ಟಕ್ಕಾಗಿಯೇ ಈ ರೀತಿಯ ಕೂಟಗಳ ಸ್ಥಾಪನೆ ಆಯ್ತೇನೋ ಎಂದು ಅನಿಸಬಹುದು; ಅದು ನಮ್ಮ ಸಂಕುಚಿತ ದೃಷ್ಟಿಯಾಗುತ್ತದೆ. ಕನ್ನಡ ಭಾಷೆ, ಕಲೆ, ಸಂಸ್ಕೃತಿ ಇವುಗಳ ಪ್ರಚಾರ, ಕನ್ನಡಿಗರ ಪರಸ್ಪರ ಭೇಟಿ ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡುವುದಕ್ಕೆ ಅವಕಾಶ, ಮುಂದಿನ ಪೀಳಿಗೆಗೆ ನಮ್ಮ ಭಾಷೆ, ಆಚಾರ-ವಿಚಾರಗಳ ಪರಿಚಯ ಮಾಡಿಸುವ ಪ್ರಯತ್ನ-ಇವೆಲ್ಲ ದೂರದೃಷ್ಟಿಗಳಿದ್ದವು ಈ ಕನ್ನಡಕೂಟಗಳನ್ನು ಸ್ಥಾಪಿಸಿದವರಿಗೆ. ಅದಕ್ಕೆ ನಿದರ್ಶನವೆಂದರೆ ಬೆಳವಾಡಿ ಶಂಕರನಾರಾಯಣರು ಆಗಲೇ ಮಕ್ಕಳಿಗೆ ಕನ್ನಡ ಕಲಿಸಲು ಕಾವೇರಿಯ ಆಶ್ರಯದಲ್ಲಿ ವಾರಾಂತ್ಯದ ಪಾಠಶಾಲೆ ಆರಂಭಿಸಿದ್ದರಂತೆ. ಹಾಗಾಗಿ, ಕಾವೇರಿಯೆಂದರೆ 'ವಾಷಿಂಗ್ಟನ್ ಡಿಸಿ ಪ್ರದೇಶದ ನೂರಾರು ಕನ್ನಡಿಗ ಕುಟುಂಬಗಳಿಗೆ ಪ್ರತಿವರ್ಷವೂ ಸಂಕ್ರಾಂತಿ ಎಳ್ಳು, ಯುಗಾದಿ ಬೇವು-ಬೆಲ್ಲ, ಗಣೇಶಹಬ್ಬದ ಕಡುಬು, ದೀವಳಿಗೆಯ ಮೈಸೂರುಪಾಕುಗಳನ್ನು ಬಡಿಸುವುದು ಒಂದು ಕಿರಿಯ ಅಂಶವಾದರೆ, ಕನ್ನಡಸಂಗೀತ, ನೃತ್ಯ ನಾಟಕಗಳನ್ನು ಉಳಿಸಿ, ಬೆಳೆಸಿ, ಪ್ರದರ್ಶಿಸಿ ಇಲ್ಲಿನ ಕಲಾಪ್ರತಿಭೆಗಳನ್ನು ಪ್ರೋತ್ಸಾಹಿಸಿ, ಕರ್ನಾಟಕದಿಂದ ಅಮೆರಿಕಾಗೆ ಭೇಟಿ ನೀಡುವ ಪ್ರಮುಖ ಕವಿ, ಸಾಹಿತಿ, ಕಲಾವಿದರನ್ನೂ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕನ್ನಡಿಗರನ್ನೂ ಬರಮಾಡಿಕೊಂಡು ಸತ್ಕರಿಸಿ ಸಂತಸ ಪಡುವ, 'ಸುಸಂಸ್ಕೃತರಿಂದ ಸಮೃದ್ಧವಾಗಿರುವ ಒಕ್ಕೂಟ' ಎನ್ನುವುದು ಹಿರಿಯ ಮತ್ತು ಹೆಮ್ಮೆಯ




# ರಾಜಶೇಖರ ಮತ್ತು ಕೃಷ್ಣಮೂರ್ತಿ
# ಕಾವೇರಿಯ 'ಆರ್.ಕೆ. ಬ್ರದರ್ಸ್'

**1972ರಲ್ಲಿ ಕಾವೇರಿ ಕನ್ನಡಸಂಘ ಆರಂಭವಾದಾಗಿಂದ, ಇಂದಿಗೂ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ, ಎಳೆಯರಿಗೆ ಪ್ರೀತಿಯಿಂದ ಮಾರ್ಗದರ್ಶನ ಮಾಡುವ, ತರುಣರನ್ನೂ ನಾಚಿಸುವಷ್ಟು ಉತ್ಸಾಹ ಮತ್ತು ಚೈತನ್ಯಇರುವ ಇಬ್ಬರು ಸದಸ್ಯರೆಂದರೆ ಡಿ.ಎನ್. ರಾಜಶೇಖರ್ ಮತ್ತು ಎಸ್. ಕೃಷ್ಣಮೂರ್ತಿ.**

**ಇವರಿಬ್ಬರೂ ಕರ್ನಾಟಕದ ಬೇರೆಬೇರೆ ಊರುಗಳಿಂದ ಬೇರೆ ಬೇರೆ ಹಿನ್ನೆಲೆಯಿಂದ ವಾಷಿಂಗ್ಟನ್‌ಗೆ ಬಂದು ನೆಲೆಸಿದವರಾದರೂ 'ಕಾವೇರಿ ' ಸದಸ್ಯರ ಪಾಲಿಗೆ 'ಆರ್.ಕೆ. ಬ್ರದರ್ಸ್'. ಕಾವೇರಿಯ ಆಧಾರಸ್ತಂಭಗಳು. 1978 ಮತ್ತು 1979ರಲ್ಲಿ ಅನುಕ್ರಮವಾಗಿ ಅಧ್ಯಕ್ಷರಾಗಿದ್ದಾಗ ಕರ್ನಾಟಕದ ಕಲಾವಿದರನ್ನು ಆಹ್ವಾನಿಸಿ ಅವರ ಪ್ರತಿಭೆಯನ್ನು ಇಲ್ಲಿನ ಕನ್ನಡಿಗರಿಗೆ ಪರಿಚಯ ಮಾಡಿಸುವ ಉದ್ದೇಶದಿಂದ 'ಆರ್.ಕೆ. ಕ್ರಿಯೇಷನ್ಸ್' ಎಂಬ ಬ್ಯಾನರ್‌ನಡಿ ಕರ್ನಾಟಕದಿಂದ ಮಾಸ್ಟರ್ ಹಿರಣ್ಣಯ್ಯ, ಸಿ.ಆರ್. ಸಿಂಹ ಮುಂತಾದ ಕಲಾವಿದರನ್ನು ಕರೆಯಿಸಿ ಅಮೆರಿಕಾದ್ಯಂತ ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಎಸ್. ಕೃಷ್ಣಮೂರ್ತಿಯವರಿಗೆ ಕಾವೇರಿ ಸಂಘದೊಡನಿರುವ ಅವಿನಾಭಾವ ಸಂಬಂಧ ಎಷ್ಟು ಪ್ರಖ್ಯಾತವೆಂದರೆ ವಾಷಿಂಗ್ಟನ್ ಪ್ರದೇಶದ ಬೇರೆ ಭಾರತೀಯ ಸಂಘಟನೆಗಳ ಮುಖಂಡರು, ಶಿವ-ವಿಷ್ಣು ದೇವಾಲಯದ ಆಡಳಿತ ಮಂಡಳಿ ಮತ್ತು ಅರ್ಚಕರೇ ಮೊದಲಾದವರು ಇವರನ್ನು 'ಕಾವೇರಿ ಕೃಷ್ಣಮೂರ್ತಿ' ಎಂದೇ ಸಂಬೋಧಿಸುತ್ತಾರೆ.**

---

ಅಂಶ.

ಒಗ್ಗಟ್ಟು ಮತ್ತು ಪಾರದರ್ಶಕತೆಗೆ ಹೆಸರಾದ ಈ ಸಂಘಟನೆಯು ಕಳೆದ ಐವತ್ತು ವರ್ಷಗಳಲ್ಲಿ ರಾಜಕೀಯದ ಗೊಂದಲವಿಲ್ಲದೆ, ಪ್ರತಿವರ್ಷವೂ ನವಚೈತನ್ಯ ತುಂಬುವ ತರುಣರ ಮುಂದಾಳತ್ವದಲ್ಲಿ ಮುನ್ನಡೆದಿದೆ. ಕಾವೇರಿಯಲ್ಲಿ ವರ್ಷಕ್ಕೊಬ್ಬರಂತೆ ಅಧ್ಯಕ್ಷರು ಮತ್ತವರ ಕಾರ್ಯಕಾರಿ ಸಮಿತಿ. ಐವತ್ತು ವರ್ಷಗಳಲ್ಲಿ ವಿಮಲಾ ಚನ್ನಬಸಪ್ಪರಿಂದ ಹಿಡಿದು ಪ್ರಸಕ್ತ ಸಾಲಿನ ಸತೀಶ ಬೆಳಗುತ್ತಿಯವರವರೆಗೆ ಒಟ್ಟು ನಲ್ವತ್ತೆಂಟು ಅಧ್ಯಕ್ಷರು ಕಾವೇರಿಯ ಸಾರಥ್ಯ ವಹಿಸಿದ್ದಾರೆ. ಇಲ್ಲಿ ಯಾವೊಬ್ಬ ವ್ಯಕ್ತಿಗಾಗಲಿ, ಯಾವ ಒಂದು ಗುಂಪಿಗಾಗಲಿ ಸಂಘಕ್ಕಿಂತ ಹೆಚ್ಚಿನ ಪ್ರಾಧಾನ್ಯವಿಲ್ಲ, ಸದಸ್ಯರು ಪ್ರತಿ ವರ್ಷವೂ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತ ಬಂದಿದ್ದಾರೆ. ಪ್ರಜಾಪಭುತ್ವವನ್ನು, 'ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು' ತತ್ತ್ವವನ್ನು ಇಷ್ಟೊಂದು ಆದರ್ಶ ರೀತಿಯಲ್ಲಿ ಪಾಲಿಸಿರುವ ಸಂಘ-ಸಂಸ್ಥೆ ಬಹುಶಃ ಬೇರೊಂದು ಇರಲಿಕ್ಕಿಲ್ಲ.


ನದಿಗೆ ಹೇಗೆ ನಿರಂತರ ಚಲನೆಯೇ ಜೀವಾಳವೋ ಹಾಗೆ ಯಾವುದೇ ಒಂದು ಸಂಸ್ಥೆ ಅಥವಾ ಸಂಘಟನೆಗೆ ಕೂಡ. ಕಾವೇರಿಯಲ್ಲಿ ಪ್ರತಿವರ್ಷವೂ ಹೊಸ ಕಾರ್ಯಕಾರಿ ಸಮಿತಿ, ಹೊಸ ಅಧ್ಯಕ್ಷ (ಅಥವಾ ಅಧ್ಯಕ್ಷೆ-ಇದುವರೆಗೆ 15 ಮಹಿಳೆಯರೂ 'ಕಾವೇರಿ'ಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ), ಹೊಸ ಹುಮ್ಮಸ್ಸಿನಿಂದ ಹೊಸ ಹೊಸ ಯೋಜನೆಗಳ ಪ್ರಯತ್ನ, ಪ್ರಯೋಗ, ಯಶಸ್ಸು, ಹಾಗಂತ ಒಮ್ಮೆ ಅಧ್ಯಕ್ಷಸ್ಥಾನ ಅಲಂಕರಿಸಿದವರು ಅಥವಾ ಸಮಿತಿಯಲ್ಲಿದ್ದವರು ಆಮೇಲೆ ಕೂಟದ ಚಟುವಟಿಕೆಗಳಿಂದ ದೂರ ಸರಿಯುತ್ತಾರೆಂಬ ಅಭಿಪ್ರಾಯವನ್ನೂ ಕಾವೇರಿ ಸುಳ್ಳಾಗಿಸಿದೆ. ಸುವರ್ಣ ಮಹೋತ್ಸವ ಆಚರಣೆಯಲ್ಲಂತೂ ಯೋಜನೆಯಿಂದ ಹಿಡಿದು ಕಾರ್ಯಗತಗೊಳಿಸುವವರೆಗೆ ವಿವಿಧ ಸಮಿತಿಗಳ ನೇತೃತ್ವ ವಹಿಸಿ, ಸ್ವಯಂ ಸೇವಕರ ಹೆಗಲಿಗೆ ಹೆಗಲು ಕೊಟ್ಟು ದುಡಿದವರಲ್ಲಿ ಹೆಚ್ಚಿನವರು ಕಾವೇರಿಯ ಮಾಜಿ ಅಧ್ಯಕ್ಷರುಗಳೇ. ಮೈತ್ರಿ ಜಯದೇವ್, ಶರ್ಮಿಳಾ ಮೂರ್ತಿ, ನಾಗಶಂಕರ್, ಮಾದೇಶ ಬಸವರಾಜು, ಸುಧಾಕರ ಸರಸ್ವತೀಪುರ, ಹರಿದಾಸ್ ಲಹರಿ-ಇವಿಷ್ಟು ಜನ 'ತರುಣ'ರಿದ್ದ ಸಂಚಾಲನ ಸಮಿತಿ; ಬೆಂಗಾವಲಾಗಿ ಸಲಹಾ ಸಮಿತಿಯಲ್ಲಿ ಭಾರತಿ ಸೆಟ್ಟಿ, ಜಯಶ್ರೀ ಜಗದೀಶ್, ಎಸ್. ಕೃಷ್ಣಮೂರ್ತಿ, ಡಾ.ಮೈ.ಶ್ರೀ.ನಟರಾಜ, ರವಿ ಡಂಕಣಿಕೋಟೆ, ಡಾ.ರವಿ ಹರಪ್ಪನಹಳ್ಳಿ ಮತ್ತು ಸುರೇಶ ರಾಮಚಂದ್ರ-ಅನುಭವಿ ಹಿರೀಕರು. ಇವರೆಲ್ಲರೂ ಈ ಹಿಂದಿನ ವರ್ಷಗಳಲ್ಲಿ 'ಕಾವೇರಿ'ಯ ಸಾರಥ್ಯ ವಹಿಸಿದವರೇ. ಸಂಘಟನೆಯನ್ನು ಅದರ ಬಾಲ್ಯಾವಸ್ಥೆಯಿಂದಲೂ ಪೋಷಿಸಿಕೊಂಡು ಬಂದಿರುವವರಿಗೆ ಸುವರ್ಣಸಂಭ್ರಮ ತುಸು ಹೆಚ್ಚೇ ಇರುವುದು ಸಹಜವೇ ತಾನೆ? ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ 'ಕಾವೇರಿ' ತನ್ನ ಕಾರ್ಯಕ್ರಮಗಳನ್ನಷ್ಟೇ ಅದ್ದೂರಿಯಿಂದ ನಡೆಸಿ ಕೈತೊಳೆದುಕೊಳ್ಳುವ ಜಾಯಮಾನದ್ದಲ್ಲ. ಅಮೆರಿಕಾದ ಈಶಾನ್ಯ ವಲಯದ ವಿವಿಧ ಕನ್ನಡ ಸಂಘಟನೆಗಳನ್ನು ಒಗ್ಗೂಡಿಸಿ ಎರಡು ಬಾರಿ ಸಮ್ಮೇಳನಗಳನ್ನು ನಡೆಸಿದ್ದು, ಅದಕ್ಕಿಂತಲೂ ವಿಶೇಷವಾಗಿ 2006ರಲ್ಲಿ ನಾಲ್ಕನೆಯ 'ಅಕ್ಕ' ವಿಶ್ವಕನ್ನಡ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ್ದು ಇದಕ್ಕೆ ನಿದರ್ಶನ. ಕನ್ನಡ-ಕನ್ನಡಿಗ-ಕರ್ನಾಟಕ ಎಂಬ ಚೌಕಟ್ಟನ್ನೂ



## ಅತಿರುಚಿಕರ ಅಡುಗೆಯ ಆನಂದ ಪೂಜಾರ್

**ಕಾವೇರಿ ಸುವರ್ಣ ಮಹೋತ್ಸವದ ಎರಡೂ ದಿನಗಳಲ್ಲಿ ಊಟ-ತಿಂಡಿ ಸರಬರಾಜು ಮಾಡಿದವರು, ಉಡುಪಿ ಮೂಲದ, ಇಲ್ಲಿ ಕಳೆದೆರಡು ದಶಕಗಳಿಂದ 'ವುಡ್‌ಲ್ಯಾಂಡ್ಸ್ ರೆಸ್ಟೋರೆಂಟ್' ಉದ್ಯಮ ನಡೆಸುತ್ತಿರುವ ಆನಂದ ಪೂಜಾರ್. ಇವರ ರೆಸ್ಟೋರೆಂಟ್‌ನ ಖ್ಯಾತಿ ಇಲ್ಲಿನ ರಾಷ್ಟ್ರೀಯ ದೈನಿಕ 'ದ ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯಲ್ಲಿ ಶಹಬ್ಬಾಸ್‌ಗಿರಿಯ ವಿಮರ್ಶೆ ಪಡೆದಿರುವಂಥದ್ದು.**

**ಭಾರತದಿಂದ ಪ್ರಧಾನಿ ನರೇಂದ್ರ ಮೋದಿಯವರು ವಾಷಿಂಗ್ಟನ್ ಡಿಸಿಗೆ ಬಂದಾಗ ಅವರಿಗೆ ಅಪ್ಪಟ ಸಸ್ಯಾಹಾರದ ಭೋಜನ ಒದಗಿಸಿದ ಕೀರ್ತಿ ಆನಂದ್ ಪೂಜಾರ್ ಅವರದು. ಸುವರ್ಣ ಮಹೋತ್ಸವದಲ್ಲಿ ಪ್ರತಿ ಹೊತ್ತಿನ ಊಟಕ್ಕೆ ಕರ್ನಾಟಕದ ವಿವಿಧ ಪ್ರದೇಶಗಳ ವಿಶೇಷ ಖಾದ್ಯಗಳು. ಮೊದಲ ದಿನ ಚಹಾ-ಕಾಫಿ ಜೊತೆ ಕುರುಕಲು ತಿಂಡಿಯಾಗಿ ಹಲಸಿನ ಕಾಯಿ ಚಿಪ್ಸ್, ಬಾಳೆಕಾಯಿ ಬಜ್ಜಿ, ರಾತ್ರಿ ಊಟದಲ್ಲಿ ಅಪೆಟೈಝರ್ ಗೋಳಿಬಜೆ, ಆಮೇಲೆ ಅನನಾಸಿನ ಗೊಜ್ಜು, ಮಂಗಳೂರು ಸೌತೆಕಾಯಿ ಮಜ್ಜಿಗೆ ಹುಳಿ, ಹುರುಳಿ-ಗಜ್ಜರಿ ಪಲ್ಯ, ಹಲಸಿನ ಹಪ್ಪಳ, ಬಾದಾಮ್ ಪೂರಿ- ಹೀಗೆ ಕರಾವಳಿ ಸ್ಪೆಷಲ್ ಎರಡನೆಯ ದಿನ ರಾತ್ರಿಯೂಟಕ್ಕೆ ಮೈಸೂರು ಬೋಂಡಾ, ರಾಗಿಮುದ್ದೆ, ಬಸ್ಸಾರು, ನುಚ್ಚಿನುಂಡೆ, ತರಕಾರಿಕೂಟು, ಪುಳಿಯೋಗರೆ, ಫೇಣಿ ಮತ್ತು ಬಾದಾಮ್ ಹಾಲು... ಇತ್ಯಾದಿ ಮೈಸೂರು-ಬೆಂಗಳೂರು ವಿಶೇಷ. ಶನಿವಾರ ಮಧ್ಯಾಹ್ನದ ಊಟ ಸಂಪೂರ್ಣವಾಗಿ ಉತ್ತರ ಕರ್ನಾಟಕ ಸ್ಪೆಷಲ್. ಇದಕ್ಕೆ ಆನಂದ್ ಪೂಜಾರ್‌ಗೆ ಸಾಥ್ ಕೊಟ್ಟದ್ದು ಜೆಎಸ್‌ಎಸ್ ಸಂಸ್ಥೆಯ ಪಾಕಶಾಲೆ. ಕರ್ನಾಟಕದಿಂದ ತರಿಸಿದ ಜೋಳದ ರೊಟ್ಟಿ ಮತ್ತು ಸಜ್ಜೆ ರೊಟ್ಟಿಗಳ ಜೊತೆಗೆ ಇಲ್ಲಿಯೇ ತಯಾರಿಸಿದ ಪುಂಡಿಪಲ್ಯ, ಕಟ್ಟಿನಸಾರು, ಗುರೆಳ್ಳು ಚಟ್ನಿ, ರಂಜಕ, ಕರಿಂಡಿ, ಅಗಸಿಪುಡಿ ಚಟ್ನಿ, ಅಂಟಿನುಂಡೆ, ಮಸಾಲೆ ಮೆಂತ್ಯತಾಲಿಪಟ್ಟು, ಶೇಂಗಾ ಹೋಳಿಗೆ ಇತ್ಯಾದಿ. ಕೋವಿಡ್ ಸಮಯದ ಗೃಹಬಂಧನದ ಅನಂತರ ಹೀಗೊಂದು ಭವ್ಯ ಸಮಾರಂಭವನ್ನು, ರಸದೌತಣವನ್ನು ಇಷ್ಟಮಿತ್ರರೆಲ್ಲರೊಡನೆ ಸೇರಿ ಸವಿಯುವ ಅವಕಾಶ ಸಿಕ್ಕಿದ್ದು ಅನೇಕರಿಗೆ ಅದೇ ಮೊದಲು.**



# ಎಲ್ಲರ ಅಚ್ಚುಮೆಚ್ಚು ಈ ಹಂಪಿ ರಥದ ಪಡಿಯಚ್ಚು

**ಸು**ವರ್ಣ ಮಹೋತ್ಸವ ನಡೆದ ಸಭಾಂಗಣದ ಆವರಣದಲ್ಲಿ ಪ್ರತಿಯೊಬ್ಬರ ಕಣ್ಮನ ಸೆಳೆದದ್ದು ಹಂಪಿಯ ಪ್ರಖ್ಯಾತ ಕಲ್ಲಿನ ರಥದ ಪಡಿಯಚ್ಚು. ಸುಮಾರು11 ಅಡಿ ಎತ್ತರ, ಮುಂದಿನ ಭಾಗದ ಆನೆಗಳೂ ಸೇರಿದಂತೆ 15 ಅಡಿ ಉದ್ದದ ಬೃಹತ್ ಕಲಾಕೃತಿ. ಸಂಪೂರ್ಣವಾಗಿ ಇಲ್ಲಿ ಅಮೆರಿಕದಲ್ಲಿಯೇ ಎಲ್ಲ ಸಾಮಗ್ರಿಗಳನ್ನೂ ಕೊಂಡು ತಂದು ಕೆತ್ತನೆ ಮಾಡಿ ನಿರ್ಮಿಸಿದ್ದು. ಬಿಡಿಸಿ-ಜೋಡಿಸುವ ಅನುಕೂಲವುಳ್ಳದ್ದು. ಕಾವೇರಿಯ 'ಆಸ್ಥಾನ ಶಿಲ್ಪಿ', ಮೂಲತಃ ಉಡುಪಿಯ ಹರಿದಾಸ್ ಲಹರಿ ಅವರೊಂದಿಗೆ 24 ಮಂದಿ (ಇದರಲ್ಲಿ ಒಂಬತ್ತು ಮಹಿಳೆಯರು) ಸ್ವಯಂಸೇವಕರು ಸುಮಾರು ಆರು ತಿಂಗಳಿಂದ ಪ್ರತಿ ವಾರಾಂತ್ಯದಲ್ಲಿ, ಅಂದರೆ ಸುಮಾರು ಮೂರುಸಾವಿರ ಮಾನವ ಗಂಟೆಗಳಷ್ಟು ಅವಧಿಯ ಶ್ರಮದಾನ ಮಾಡಿ ದುಡಿದುದರ ಅತಿಸುಂದರ ಫಲ. 'ದೇಸ್ ಬಿಲ್ಡ್' ಎಂಬ ಎಂಜಿನಿಯರಿಂಗ್ ಉದ್ಯಮ ನಡೆಸುತ್ತಿರುವ ಅನಂತ ಬದರೀನಾಥ್ ಮತ್ತು ಪ್ರಕಾಶ್ ಹೊಸದುರ್ಗ ಇವರು ರಥ ನಿರ್ಮಾಣಕ್ಕೆ ಬೇಕಾದ ಮರಮಟ್ಟುಗಳನ್ನು ಉಚಿತವಾಗಿ ಒದಗಿಸಿದ್ದಷ್ಟೇ ಅಲ್ಲದೆ ತಮ್ಮ ಕಾರ್ಯಾಲಯದ ಒಂದಿಷ್ಟು ಜಾಗವನ್ನು ರಥ ನಿರ್ಮಾಣ ಕಾರ್ಯಾಗಾರವಾಗಿಸಿದ್ದರು. '2 ಪಾರ್ಟ್ ಪಾಲಿಯುರೇಥಿನ್
ಡೆನ್ಸಿಟಿ ಎಕ್ಸ್‌ಪಾಂಡಿಂಗ್ ಪೌರ್ ಫೋಮ್ ಎಂಬ ದ್ರಾವಣವನ್ನು ಅಮೆಜಾನ್‌ನಲ್ಲಿ ಖರೀದಿಸಿದೆವು. ಆ ಎರಡೂ ದ್ರಾವಣಗಳನ್ನು ಸಮಪಾಲಿನಲ್ಲಿ ಬೆರೆಸಿ, ಸುಮಾರು30 ಸೆಕೆಂಡ್‌ಗಳೊಳಗೆ ಅಚ್ಚಿನಲ್ಲಿ ಹೊಯ್ಯಬೇಕು. ಎರಡು ನಿಮಿಷಗಳ ಬಳಿಕ ಅಚ್ಚಿನಿಂದ ಘನೀಕೃತಗೊಂಡ ಆಕಾರವನ್ನು ಹೊರತೆಗೆಯಬೇಕು. ಈ ದ್ರಾವಣಗಳು ಆರೋಗ್ಯಕ್ಕೂ ಹಾನಿಕರ. ಆದ್ದರಿಂದ ಬಹಳ ನಾಜೂಕಾಗಿ ಬಳಸಬೇಕಾಗಿತ್ತು. ಕೆಲವು ಅಚ್ಚುಗಳನ್ನು ಶಿವವಿಷ್ಣು ದೇವಸ್ಥಾನದಿಂದ ತಂದೆವು. ಬಹಳಷ್ಟು ಅಚ್ಚುಗಳನ್ನು ನಾವೇ ತಯಾರಿಸಿದೆವು. ಹಲವಾರು ಡಿಸೈನ್‌ಗಳನ್ನು ಫೋಮ್ ಶೀಟ್ ಬಳಸಿ ಕೆತ್ತಿದೆವು. ಮಂಟಪದಲ್ಲಿನ ಮೂರ್ತಿಗಳನ್ನು ಆವೆಮಣ್ಣಿನಲ್ಲಿ ರಚಿಸಿದೆವು. ಆನೆಗಳನ್ನು ಅಂಟು ಕಾಗದಗಳಿಂದ ಮಾಡಿದೆವು. ರಥದ ಆಧಾರಸ್ತಂಭಗಳನ್ನು ಮರದ ತುಂಡುಗಳಿಂದ ತಯಾರಿಸಿದೆವು. ಅದರ ಮೇಲೆ ಫೋಮ್‌ನಿಂದ ಮಾಡಿದ ವಿವಿಧ ಆಕೃತಿಗಳನ್ನು ತೂಗಾಡಿಸಿದೆವು. ಸಮ್ಮೇಳನದ ಹಿಂದಿನ ದಿನ ರಥದ ಬಿಡಿಭಾಗಗಳನ್ನು ಎರಡು ಟ್ರಕ್‌ಗಳಲ್ಲಿ ಸಮ್ಮೇಳನ ಸ್ಥಳಕ್ಕೆ ತಂದು ಕೇವಲ ಎರಡೂವರೆ ಗಂಟೆಗಳ ಅವಧಿಯಲ್ಲಿ ರಥವನ್ನು ಕಟ್ಟಿ ನಿಲ್ಲಿಸಿದೆವು. ವಿದ್ಯುದ್ದೀಪಾಲಂಕಾರವನ್ನೂ ಮಾಡಿದೆವು. ನಮ್ಮ ತಂಡದವರೆಲ್ಲರಿಗೂ ಜೀವಮಾನದಲ್ಲಿ ಸಿಕ್ಕ ಒಂದು ಅಪೂರ್ವ ಅನುಭವ ಈ ಕಾವೇರಿ ಸುವರ್ಣ ಸಂಭ್ರಮದ ಹಂಪಿ ರಥ ನಿರ್ಮಾಣದ ಪ್ರಾಜೆಕ್ಟ್.

ಸಮ್ಮೇಳನ ನಡೆದ ಮೇರಿಯಟ್ ಹೊಟೇಲ್‌ನಲ್ಲಿ ಸಭಾಂಗಣದ ಪ್ರವೇಶ ದ್ವಾರದ ಬಳಿಯೇ ನಿಲ್ಲಿಸಿದ್ದ ಈ ರಥವನ್ನು ನೋಡಲು, ಅದರ ಜೊತೆ ಫೋಟೊ ತೆಗೆಸಿಕೊಳ್ಳಲು ಜನರು ಸರತಿಯ ಸಾಲಿನಲ್ಲಿ ನಿಂತು ರಥದ ಭವ್ಯತೆಯನ್ನು ಕಣ್ತುಂಬಿಸಿ ಕೊಳ್ಳುತ್ತಿದ್ದುದನ್ನು ಕಂಡಾಗ ನಮ್ಮ ಶ್ರಮಕ್ಕೊಂದು 'ಧನ್ಯತೆ ಸಿಕ್ಕಿತು' ಎಂದು ಹೆಮ್ಮೆಯಿಂದ ವಿವರಿಸುತ್ತಾರೆ ಹರಿದಾಸ್ ಲಹರಿ. ಮೇರಿಯಟ್ ಹೊಟೇಲ್‌ನ ಸಿಬಂದಿಯಂತೂ ಈ ರಥಕ್ಕೆ ಫುಲ್ ಫಿದಾ ಆಗಿದ್ದರು. 'ನಮ್ಮಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನಗಳೆಲ್ಲ ಆಗಾಗ ಆಗುತ್ತಿರುತ್ತವೆ. ವಿವಿಧ ರೀತಿಯ ಅಲಂಕಾರಗಳೂ ಇರುತ್ತವೆ. ಆದರೆ ಈ ರಥದಂಥ ಸಿಂಗಾರವನ್ನು ನಾವು ಇದುವರೆಗೆ ನೋಡಿದ್ದಿಲ್ಲ. ಇದು ನಮ್ಮ ಹೊಟೇಲ್‌ನ ಇತಿಹಾಸಕ್ಕೆ ಒಂದು ಶೋಭೆ' ಎಂದು ಮೇರಿಯಟ್ ಹೊಟೇಲ್ ಮ್ಯಾನೇಜರರೇ ಉದ್ಗರಿಸಿದ್ದರು.

ಮೀರಿ, ರಾಜಧಾನಿ ಪ್ರದೇಶದಲ್ಲಿರುವ ಇತರ ಭಾರತೀಯ ಸಂಘಟನೆಗಳೊಂದಿಗೆ ಕೈಜೋಡಿಸಿ ಸಮಾಜಮುಖಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು 'ಕಾವೇರಿ' ಯಾವತ್ತೂ ಹಿಂಜರಿದಿದ್ದಿಲ್ಲ.

### ಪ್ರತಿಭೆಗಳ ಆಡುಂಬೊಲ

'ಕಾವೇರಿ'ಯ ಮೊತ್ತಮೊದಲ ಅಧ್ಯಕ್ಷೆ ವಿಮಲಾ ಚನ್ನಬಸಪ್ಪ ಅಮೆರಿಕನ್ನಡಿಗರಲ್ಲೇ ಅತ್ಯಂತ ಹಿರಿಯ ಕವಯಿತ್ರಿ ಎನಿಸಿಕೊಂಡವರು, ಎಲ್ಲರಿಗಿಂತ ಮೊದಲು ಕವನ ಸಂಗ್ರಹ ಪ್ರಕಟಿಸಿದವರು. 'ಕಾವೇರಿ'ಯ ಹೆಂಗಳೆಯರನ್ನು ಗುಂಪಾಗಿ ಸೇರಿಸಿ ಸಮೂಹನೃತ್ಯಗಳನ್ನು, ಪುರುಷರಿಗೆ ಜಡೆಕೋಲಾಟ ಮುಂತಾದ ಸಾಮೂಹಿಕ ಪ್ರಸ್ತುತಿಗಳನ್ನು ಹೇಳಿಕೊಟ್ಟ ಸಾಹಸ ಮಾಡಿದವರು. ಮೈಸೂರಿನಲ್ಲಿ ನಡೆದ ಮೊತ್ತಮೊದಲ ವಿಶ್ವಕನ್ನಡ ಸಮ್ಮೇಳನದಲ್ಲಿ ಕಾವೇರಿಯ ಮತ್ತು ಅಮೆರಿಕನ್ನಡಿಗರ ವಿಶೇಷ ಪ್ರತಿನಿಧಿಯಾಗಿ ಕವಿಗೋಷ್ಠಿಯಲ್ಲೂ ಭಾಗವಹಿಸಿದವರು. 'ಕಾವೇರಿ'ಯ ಇನ್ನೊಬ್ಬ ಮೇರುಪ್ರತಿಭೆ ಡಾ. ಮೈ. ನಟರಾಜ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳೆಲ್ಲದರಲ್ಲೂ ಸೈ ಎನಿಸಿ ಉತ್ಕೃಷ್ಟ ಕೃತಿಗಳನ್ನು ರಚಿಸಿದವರು. ಭಾರತದಾಚೆ ರೇಡಿಯೋದಲ್ಲಿ ಮತ್ತು ಟಿವಿಯಲ್ಲಿ ಮೊತ್ತಮೊದಲಿಗೆ ಪ್ರಸಾರವಾದ 'ಮರಳಿ ಯತ್ನವ ಮಾಡು' ಕನ್ನಡ ನಾಟಕದ ರಚನಕಾರರು. ಮಧುಚಂದ್ರ-ಸಿರಿಕೇಂದ್ರ ಕವನ ಸಂಗ್ರಹಕ್ಕಾಗಿ ಗೊರೂರು ಪ್ರಶಸ್ತಿ ಪಡೆದವರು.'ಆಳ್ವಾಸ್ ನುಡಿಸಿರಿ' ಉತ್ಸವದಲ್ಲಿ ಸನ್ಮಾನಿತರು. ಹಾಗೆಯೇ ಬಿ.ವಿ. ಕಾರಂತರ ಗರಡಿಯಲ್ಲಿ ಪಳಗಿ, ಕರ್ನಾಟಕದಲ್ಲಿ 'ಬೆನಕ' ತಂಡದಲ್ಲೂ ಸೇರಿದಂತೆ ಹೆಸರಾಂತ ರಂಗನಟರಾಗಿ ಬೆಳೆದ ಮನೋಹರ ಕುಲಕರ್ಣಿ 'ಕಾವೇರಿ'ಯ ಸದಸ್ಯರಾಗಿದ್ದವರು; ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ', ಕಾರ್ನಾಡರ 'ಯಯಾತಿ' ಮುಂತಾದ ನಾಟಕಗಳನ್ನು 'ಕಾವೇರಿ'ಯಲ್ಲಷ್ಟೇ ಅಲ್ಲ, ಅಮೆರಿಕಾದ್ಯಂತ ಪ್ರದರ್ಶನಗಳಿಗೊಯ್ದವರು.



*'ಕಾವೇರಿ'ಯ ಮೊತ್ತಮೊದಲ ಅಧ್ಯಕ್ಷೆ ದಿ. ವಿಮಲಾ ಚೆನ್ನಬಸಪ್ಪ.*



*'ಕಾವೇರಿ' ಯ ಸಂಸ್ಥಾಪಕ ದಿ. ಶಂಕರನಾರಾಯಣ ಬೆಳವಾಡಿ.*

ಡಾ. ತಾವರೆಕೆರೆ ಶ್ರೀಕಂಠಯ್ಯ ಅನೇಕ ನಾಟಕಗಳನ್ನು ಪ್ರದರ್ಶಿಸುವುದರ ಜೊತೆಗೇ ರಂಗಭೂಮಿಗೇ ಮುಡಿಪಾದ 'ನಾಟ್ಯಭಾರತಿ' ಸಂಸ್ಥೆಯನ್ನು ಸ್ಥಾಪಿಸಿ ಕನ್ನಡದ ಅನೇಕ ಪ್ರತಿಭಾವಂತ ನಟ-ನಟಿಯರನ್ನು ಹಿಂದೀ/ಇಂಗ್ಲಿಷ್ ರಂಗಭೂಮಿಗೆ ಪರಿಚಯಿಸಿದವರು. ಮತ್ತೊಂದು ಪ್ರತಿಭೆ ಶಶಿಕಲಾ ಚಂದ್ರಶೇಖರ್ ಸಣ್ಣಕತೆಗಳು, ಕವನಗಳು ಮತ್ತು ನಾಗತಿಹಳ್ಳಿ ಚಂದ್ರಶೇಖರರ ಸಿನೆಮಾಗಳಿಗೆ ಕಥೆಗಳನ್ನೂ ಚಿತ್ರಗೀತೆಗಳನ್ನೂ ಬರೆದುಕೊಟ್ಟವರು. ಇನ್ನು, ಕರ್ನಾಟಕ ಶಾಸ್ತ್ರೀಯಸಂಗೀತದ ವಿಚಾರಕ್ಕೆ ಬಂದರೆ ವಿದುಷಿ ಉಷಾಚಾರ್, ಪತಿ ಎ.ಆರ್. ಚಾರ್ ಸಂಚಾಲಕತ್ವದಲ್ಲಿ ಸ್ಥಾಪಿಸಿದ 'ನಾದತರಂಗಿಣಿ' ಸಂಸ್ಥೆಯಿಂದ ಸಹಸ್ರಾರು ಶಿಷ್ಯರನ್ನು ತಯಾರಿಸಿದವರು; ಕರ್ನಾಟಕದಿಂದ ಖ್ಯಾತ ಕಲಾವಿದರನ್ನು ಕರೆಸಿ ಪ್ರತಿವರ್ಷವೂ ಪುರಂದರದಾಸರ ಮತ್ತು ತ್ಯಾಗರಾಜರ ಸ್ಮರಣೆಯಲ್ಲಿ ಸಂಗೀತೋತ್ಸವಗಳನ್ನು ನಡೆಸುವವರು. ಭರತನಾಟ್ಯ ವಿಭಾಗದಲ್ಲಿ ಈ ಗರಿಮೆ, ಹಿರಿಯ ಕಲಾವಿದೆ ಮೀನಾ ಜಯದೇವ್ ಮತ್ತು ಈಗ 'ಸೃಷ್ಟಿ ಸ್ಕೂಲ್ ಆಫ್ ಡ್ಯಾನ್ಸ್' ಸಂಸ್ಥೆಯಲ್ಲಿ ನೂರಾರು ಮಕ್ಕಳಿಗೆ ನೃತ್ಯಕಲಿಸುತ್ತಿರುವ ವಾಣಿ ರಮೇಶ್, ನಾಟ್ಯಭೂಮಿ ನೃತ್ಯಶಾಲೆಯ ದೀಪ್ತಿ ಮುಕುಂದ್ ಮುಂತಾದವರದು. ಇಲ್ಲೇ ಹುಟ್ಟಿ ಬೆಳೆದ ಎರಡನೆಯ ತಲೆಮಾರಿನವರೂ ಪ್ರತಿಭೆಯ ಗಣಿಗಳೇ. ಸೌಂದರ್ಯ ಸ್ಪರ್ಧೆಯಿರಲಿ, ನೃತ್ಯ ಸ್ಪರ್ಧೆಗಳಿರಲಿ ಪ್ರಶಸ್ತಿಗಳನ್ನು ಬಾಚುವ ಅನಘಾ ಶ್ರೀನಿವಾಸ್, ಇಶಿಕಾ ಗಿರೀಶ್; ಶಂಕರ್ ಮಹಾದೇವನ್‌ರಂಥ ದಿಗ್ಗಜರೊಡನೆ ಹಾಡಿರುವ

ಸಾನಿಕಾ ಮಹಾಶೆಟ್ಟಿ; ಶಾಸ್ತ್ರೀಯ ಸಂಗೀತದಲ್ಲಿ ಉದಯೋನ್ಮುಖ ಕಲಾವಿದ ನಹಾರ್ ಗುರುದತ್ತ... ಇವರೆಲ್ಲ 'ಕಾವೇರಿ'ಯ ಕುಡಿಗಳು.

ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ಇತ್ತೀಚೆಗೆ ನಡೆದ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಕರ್ನಾಟಕದಿಂದ ಆಹ್ವಾನಿಸಿದ ಕಲಾವಿದರಿಗಿಂತಲೂ ಅತ್ಯುತ್ಕೃಷ್ಟ ಪ್ರಸ್ತುತಿಗಳೆನಿಸಿದ್ದು ಕಾವೇರಿಗರ ಪ್ರತಿಭೆಯಿಂದ ರೂಪುಗೊಂಡಂಥವೇ! ಉಷಾಚಾರ್ ಪ್ರಸ್ತುತಪಡಿಸಿದ 'ಕನ್ನಡತಾಯಿಗೆ ಕಾವೇರಿಯ ಸಂಗೀತಗುಚ್ಛ ನಮನ', ಮಣಿ ಶ್ರೀನಿವಾಸ್ ತಂಡದವರಿಂದ 'ಕಾವೇರಿ ನಡೆದು ಬಂದ ದಾರಿ' ನೃತ್ಯರೂಪಕ, ಬಾಲಪ್ರತಿಭೆಗಳಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಗುರುಪ್ರಸಾದ್ ಬಳಗದವರಿಂದ 'ಕಾವೇರಿ ತೀರದಲ್ಲಿ ಒಂದು ಹಾಡು' ರಸಮಂಜರಿ, ಸುಮಾ ಮುರಳೀಧರ್ ನಿರ್ದೇಶನದಲ್ಲಿ ಮಕ್ಕಳು ಆಡಿತೋರಿಸಿದ 'ಬೊಮ್ಮನಹಳ್ಳಿಯ ಕಿಂದರಜೋಗಿ' ನಾಟಕ, ನಿತೀಶ್ ಶ್ರೀಧರ್ ನಿರ್ದೇಶನದಲ್ಲಿ ಮನೋಜ್ಞವಾಗಿ ಮೂಡಿಬಂದ 'ಮೈಸೂರುಮಲ್ಲಿಗೆ' ನಾಟಕ, ವಾಣಿ ರಮೇಶ್ ನಿರ್ದೇಶನದಲ್ಲಿ 'ಜೀವನದಿ-ಭಾವನದಿ' ನೃತ್ಯರೂಪಕ, ಎಸ್ತರ್ ಸ್ಮಿತಾ ಬಳಗದವರಿಂದ 'ಕನ್ನಡೋತ್ಸವ ಸಂಗೀತ ನೃತ್ಯ ಸ್ವರ ಸಂಗಮ', ರೋಹಿಣಿ ಕುಮಾರ್ ಮತ್ತು ತಂಡದವರು ನಡೆಸಿಕೊಟ್ಟ ಫ್ಯಾಷನ್ ಶೋ ಮತ್ತು ಇವೆಲ್ಲದಕ್ಕೆ ಕಳಶಪ್ರಾಯವಾಗಿ ಸ್ಮಿತಾ ಗಿರೀಶ್ ನಿರ್ದೇಶನದಲ್ಲಿ ಮೂಡಿಬಂದ 'ಸಮ್ಮಿಲನ' ಗ್ರ್ಯಾಂಡ್ ಫಿನಾಲೆ ನೃತ್ಯ ವೈಭವ. ವೇದಿಕೆಯ ಮೇಲೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಷ್ಟೇ ಆಕರ್ಷಕವಾಗಿ ಸಭಾಂಗಣದ ಒಳ-ಹೊರಗಿನ ವಿವಿಧ ಅಲಂಕಾರಗಳು, ಚಿತ್ರಕಲಾಕೃತಿಗಳು, ಬಣ್ಣಬಣ್ಣದ ಛತ್ರಿಗಳು... ಇವೆಲ್ಲವನ್ನೂ ವೀಕ್ಷಿಸಿದವರಿಗೆ ಅನಿಸಿದ್ದೊಂದೇ: 'ಅಬ್ಬಾ! ಎಂತೆಂಥ ಅದ್ಭುತ ಪ್ರತಿಭೆಗಳು 'ಕಾವೇರಿ'ಯಲ್ಲಿವೆ!' ಎಂದು.

### ಸಮಾಜ ಸೇವೆ

'ಕಾವೇರಿ'ಯ ಚಟುವಟಿಕೆಗಳು ಹಾಡು-ಹಸೆ ಆಟ-ಊಟ ಮೋಜು-ಮಸ್ತಿಗಳಿಗಷ್ಟೇ ಸೀಮಿತವಲ್ಲ, ಆರಂಭಿಕ ವರ್ಷಗಳಿಂದಲೂ ಕಾವೇರಿ ಸದಸ್ಯರಲ್ಲನೇಕರು ವೈಯಕ್ತಿಕ ನೆಲೆಯಲ್ಲಿ ಮತ್ತು ಸಂಘಟನೆಯ ಮೂಲಕ ದಾನಧರ್ಮಗಳನ್ನು ಮಾಡಿಕೊಂಡು ಬಂದಿದ್ದಾರೆ. ದತ್ತಿನಿಧಿ ಸಂಗ್ರಹದ ಮೂಲಕ ದೀನದಲಿತರಿಗೆ ಸಹಾಯ, ಪ್ರಕೃತಿ ವಿಕೋಪಗಳಾದಾಗ ಸಂತ್ರಸ್ತರಿಗೆ ಆರ್ಥಿಕ ನೆರವು, ಕರ್ನಾಟಕದಲ್ಲಿ ಶಾಲಾಮಕ್ಕಳಿಗೆ ಪುಸ್ತಕ ವಿತರಣೆ, ಆರೋಗ್ಯ ತಪಾಸಣಾ ಶಿಬಿರಗಳು ಮುಂತಾದ ಕೆಲಸಗಳು ಸದ್ದಿಲ್ಲದೆ ನಡೆಯುತ್ತಿವೆ. 1988ರಲ್ಲಿ 'ಕಾವೇರಿ'ಯ ಅಧ್ಯಕ್ಷರಾಗಿದ್ದ ಡಾ. ಲವಪ್ಪನವರ ಸ್ಮರಣಾರ್ಥ ಅವರ ಹುಟ್ಟೂರಾದ ಕಾಂತರಾಜಪುರದಲ್ಲಿ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉಚಿತ ಊಟ, ವಸತಿ; ಮೈಸೂರಿನಲ್ಲಿರುವ ಉಷಾಕಿರಣ್ ಕಣ್ಣಿನ ಆಸ್ಪತ್ರೆಯಲ್ಲಿ ಮೈ. ಶ್ರೀನಟರಾಜ ಸ್ಥಾಪಿಸಿರುವ ಒಂದು ಲಕ್ಷ ರೂಪಾಯಿಗಳ ನಿಧಿ, ಪ್ರತಿವರ್ಷವೂ ಬಡಜನರಿಗೆ ಕಣ್ಣಿನ ಪೊರೆ ತೆಗೆಯುವ ಶಸ್ತ್ರಚಿಕಿತ್ಸೆಗಾಗಿ ಈ ನಿಧಿಯ ಬಳಕೆ; 'ಕಾವೇರಿ'ಯ ಹಿರಿಯ ಸದಸ್ಯೆ ಭಾಗ್ಯ ರಂಗಾಚಾರ್ ಬೆಂಗಳೂರಿನಲ್ಲಿ 'ಲವ್ ಕ್ಯಾಸಲ್' ಸಂಸ್ಥೆಯನ್ನು




*ಕೈಬರಹದ ಕಾವೇರಿ ಸುದ್ದಿಪತ್ರ ದೀಪಾವಳಿ ಸಂಚಿಕೆ 1978.*

ಸ್ಥಾಪಿಸಿ ನೂರಾರು ಬಡಮಕ್ಕಳಿಗೆ ಮಧ್ಯಾಹ್ನದೂಟ ಏರ್ಪಾಡು; ಇವಲ್ಲದೆ 'ಕಾವೇರಿ'ಯ ಅನೇಕ ಸದಸ್ಯರು ಅನಾಮಧೇಯರಾಗಿ ಉಳಿಯ ಬಯಸಿ ಕರ್ನಾಟಕದಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಕೊಠಡಿ ನಿರ್ಮಾಣ ಪ್ರಾಯೋಜಕತ್ವ, ಊಟ-ವಸತಿಗಳ ಖರ್ಚು ನೋಡಿಕೊಳ್ಳುವಿಕೆ ಮಾಡಿದವರು/ಮಾಡುತ್ತಿರುವವರು ಇದ್ದಾರೆ. 'ಕಾವೇರಿ' ಸದಸ್ಯರ ಮಕ್ಕಳು ಇಲ್ಲಿನ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಪೀಸ್ ಕೋರ್, ವಿಷನ್ಸ್ ವರ್ಲ್ಡ್‌ವೈಡ್, ಯುನಿಸೆಫ್ ಮುಂತಾದ ಸಂಸ್ಥೆಗಳ ಮೂಲಕ ವಿದೇಶಗಳಲ್ಲಿ ಶ್ರಮದಾನ ಮಾಡಿದ್ದಾರೆ. ರಾಜಧಾನಿ ಪ್ರದೇಶದ ಅತಿದೊಡ್ಡ ಮತ್ತು ಅಮೆರಿಕಾದಲ್ಲಿ ಆರಂಭಿಸಿದವುಗಳ ಪೈಕಿ ಒಂದೆಂದು ಪರಿಗಣಿತ ಶಿವ-ವಿಷ್ಣು ದೇವಾಲಯದ ಸಾಂಸ್ಕೃತಿಕ ಸಮಿತಿಗಳಲ್ಲಿ, ಎಂಜಿನಿಯರಿಂಗ್ ಸಮಿತಿಗಳಲ್ಲಿ ಧರ್ಮದರ್ಶಿಗಳಾಗಿಯೂ ಸೇವೆ ಸಲ್ಲಿಸಿರುವ ಕಾವೇರಿಗರಿದ್ದಾರೆ. ವಾಷಿಂಗ್ಟನ್ ಡಿಸಿ. ಸರಕಾರವು ನಡೆಸುವ 'ಡಿಸಿ ಸೆಂಟ್ರಲ್ ಕಿಚನ್'ನಲ್ಲಿ ವರ್ಷಕ್ಕೊಮ್ಮೆ ನವೆಂಬರ್ ತಿಂಗಳಿನಲ್ಲಿ ಒಂದು ದಿನ ಆ ದಿನದ ಸಂಪೂರ್ಣ ಖರ್ಚು-ವೆಚ್ಚ ಭರಿಸುವುದರ ಜೊತೆಯಲ್ಲೇ ಸ್ವಯಂಸೇವಕರು ಹೋಗಿ ಅಡುಗೆ ತಯಾರಿಸಿ ಅದನ್ನು ಅನಾಥಾಶ್ರಮಗಳಿಗೆ ಒದಗಿಸುವುದನ್ನು ಕಳೆದ ಹಲವಾರು ವರ್ಷಗಳಿಂದ ಕಾವೇರಿ ಮಾಡಿಕೊಂಡು ಬಂದಿದೆ. ಕೋವಿಡ್ ಬಾಧೆಯ ದಿನಗಳಲ್ಲಿ ಮಾಸ್ಕ್‌ಗಳ ತೀವ್ರಕೊರತೆ ಇದ್ದಾಗ ಇಲ್ಲಿನ ಆಸ್ಪತ್ರೆ ಸಿಬಂದಿಗೆ, ರೋಗಿಗಳಿಗೆ ಒದಗಿಸಲು ಬಟ್ಟೆಯ ಸಾವಿರಾರು ಮಾಸ್ಕ್‌ಗಳನ್ನು ತಯಾರಿಸಿಕೊಟ್ಟದ್ದು, ಲಾಕ್‌ಡೌನ್‌ನಿಂದ ಕಂಗೆಟ್ಟ ಕರ್ನಾಟಕದ ಕಲಾವಿದರಿಗೆ ಧನ ಸಹಾಯವಾಗುವಂತೆ ಆನ್‌ಲೈನ್ ಮನೋರಂಜನಾ ಕಾರ್ಯಕ್ರಮಗಳ ಮೂಲಕ ದತ್ತಿ ಸಂಗ್ರಹದವರೆಗೂ 'ಕಾವೇರಿ' ಮಾಡಿರುವ ಸಮಾಜಮುಖಿ ಕೆಲಸಗಳು ಬಹಳಷ್ಟಿವೆ.

### 'ಕನ್ನಡ ಕಲಿಯೋಣ'-ವಾರಾಂತ್ಯ ಶಾಲೆ

ಕಳೆದ ಹದಿನೈದು ವರ್ಷಗಳಿಂದ ಕಾವೇರಿ ಕನ್ನಡಸಂಘವು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿರುವ ಇನ್ನೊಂದು ರಚನಾತ್ಮಕ ಚಟುವಟಿಕೆಯೆಂದರೆ 'ಕನ್ನಡಕಲಿಯೋಣ' ಕಾರ್ಯಕ್ರಮ. ಅಮೆರಿಕಾದ ಶೈಕ್ಷಣಿಕ ವರ್ಷಕ್ಕೆ ಹೊಂದುವಂತೆಯೇ, ವಾರಾಂತ್ಯಗಳಲ್ಲಿ ಕನ್ನಡ ಕಲಿಕೆ ತರಗತಿಗಳು. ಇದನ್ನು ರಾಜಧಾನಿ ಪ್ರದೇಶದ ಸುಮಾರು ಏಳೆಂಟು ಕಡೆಗಳಲ್ಲಿ ನಡೆಸಲಾಗುತ್ತದೆ. 'ಕಾವೇರಿ' ಸದಸ್ಯರೇ ಶಿಕ್ಷಕ-ಶಿಕ್ಷಕಿಯರಾಗಿ ಸೇವೆ ಸಲ್ಲಿಸುತ್ತಾರೆ. ಯಾವುದೇ ಸಂಭಾವನೆ ಇಲ್ಲ, ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಣೆಯೂ ಇಲ್ಲ. ಎಲ್ಲವೂ ಸ್ವಯಂಸೇವೆ, ನಿಃಸ್ವಾರ್ಥದ ಕೈಂಕರ್ಯ. ಸ್ವರಾಕ್ಷರ, ಕಾಗುಣಿತ, ಒತ್ತಕ್ಷರಗಳು, ಒಂದನೆಯ ವರ್ಗ, ಎರಡನೆಯ ವರ್ಗ, ಮೂರನೆಯ ವರ್ಗ... ಹೀಗೆ ಮಕ್ಕಳ ಪ್ರೌಢಿಮೆಯನ್ನನುಸರಿಸಿ ತರಗತಿಗಳು. ಕನ್ನಡದಲ್ಲಿ ಓದು-ಬರಹ ಕಲಿಸುವುದರ ಜೊತೆಗೇ ದೈನಂದಿನ ಚಟುವಟಿಕೆಗಳಲ್ಲಿ ಕನ್ನಡದಲ್ಲೇ ಮಾತನಾಡುವುದಕ್ಕೆ ಹೆಚ್ಚು ಉತ್ತೇಜನ. ಆಗಾಗ ಪರೀಕ್ಷೆಗಳು. ವರ್ಷದ ಕೊನೆಯಲ್ಲಿ, ಕೊಟ್ಟಿರುವ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಪ್ರತಿ ವಿದ್ಯಾರ್ಥಿಯೂ ಮಾಹಿತಿ ಸಂಗ್ರಹಿಸಿ ಅದರದೊಂದು ಪೋಸ್ಟರ್ ರಚಿಸಿ ಐದಾರು ನಿಮಿಷಗಳಷ್ಟು ಕಾಲ ಕನ್ನಡದಲ್ಲೇ ಮಾತನಾಡಿ ವಿವರಿಸಬೇಕು. ಇದನ್ನು ಮಕ್ಕಳು ಬಹಳ ಉತ್ಸಾಹದಿಂದ ಮಾಡುತ್ತಾರೆ. ವಿಜೇತರಿಗೆ ಬಹುಮಾನ, ಪದಕ, ಪ್ರಶಸ್ತಿಪತ್ರ ವಿತರಣೆ ಇರುತ್ತವೆ. 'ಕನ್ನಡ ಕಲಿಯೋಣ' ಕಾರ್ಯಕ್ರಮದಿಂದಾಗಿ ಮಕ್ಕಳಿಗೆ ಕನಿಷ್ಠ ಪಕ್ಷ ಅಜ್ಜಿ-ತಾತನ ಜೊತೆಯಲ್ಲಾದರೂ ಕನ್ನಡಮಾತನಾಡಲಿಕ್ಕೆ ಬರುವಂತಾಗಬೇಕು ಎಂಬುದು ಉದ್ದೇಶ. ಆದರೆ ಕೆಲವು ಜಾಣಮಕ್ಕಳು ಈ ಕನಿಷ್ಠ ನಿರೀಕ್ಷೆಯನ್ನು ಮೀರಿ ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುವುದನ್ನು ರೂಢಿಸಿಕೊಂಡಿದ್ದಾರೆ, ಕಥೆ ಪುಸ್ತಕ ಓದಿ ಅರ್ಥ ಮಾಡಿಕೊಳ್ಳುವಷ್ಟರಮಟ್ಟಿಗೆ ಓದುವ ಸಾಮರ್ಥ್ಯನ್ನೂ ಪಡೆದವರಿದ್ದಾರೆ. ಏನಿಲ್ಲವೆಂದರೂ ಅವರಿಗೆ ತಮ್ಮ ಮೂಲ ಬೇರಿನ ಅಷ್ಟಿಷ್ಟು ಪರಿಚಯ ಆಗುವುದು ಆತ್ಮವಿಶ್ವಾಸ ಬೆಳೆಯುವುದಕ್ಕೂ ಸಹಾಯವಾಗುತ್ತದೆ ಎಂಬುದು 'ಕನ್ನಡ ಕಲಿಯೋಣ' ಶಿಕ್ಷಕರ ಮತ್ತು ಹೆತ್ತವರ ಅಂಬೋಣ.

ಒಟ್ಟಿನಲ್ಲಿ ವಿದೇಶಿ ನೆಲದಲ್ಲಿ ಕನ್ನಡತನವನ್ನು ಉಳಿಸಿ ಬೆಳೆಸುವುದಕ್ಕೆ ಯಾವುದೆಲ್ಲ ರೀತಿಯಿಂದ ಸಾಧ್ಯವಾಗುತ್ತದೋ ಅವೆಲ್ಲವನ್ನೂ ಕಾವೇರಿ ಕನ್ನಡ ಸಂಘ ಅಚ್ಚುಕಟ್ಟಾಗಿ ಮತ್ತು ಅನೂಚಾನವಾಗಿ ಮಾಡಿಕೊಂಡು ಬಂದಿದೆ. ಐದಾರು ದಶಕಗಳ ಹಿಂದಿನ ಕಾಲದಿಂದ ಇಲ್ಲಿಗೆ ಬಂದು ನೆಲೆಸಿದ ಕನ್ನಡಿಗರ ಅಸ್ಮಿತೆಯಾಗಿ ರೂಪುಗೊಂಡಿದೆ. ನುಡಿಪ್ರೇಮ, ಆಚಾರ-ವಿಚಾರ, ಆಹಾರ ಸಂಸ್ಕೃತಿ, ನೋವು ನಲಿವುಗಳ ಅಭಿವ್ಯಕ್ತಿಗೊಂದು ನೆಲೆಯಾಗಿದೆ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 'ಸಂಚಯ-ಸಂಭ್ರಮ-ಸಂಕಲ್ಪ' ಎಂಬ ಧ್ಯೇಯವಾಕ್ಯಕ್ಕೆ ತಕ್ಕಂತೆ ಇದುವರೆಗಿನ ಸಾಧನೆ ಸಂಸ್ಕೃತಿಗಳ ಸಂಚಯವನ್ನು ಹೆಮ್ಮೆಯಿಂದ ಸಿಂಹಾವಲೋಕನ ಮಾಡುತ್ತ, 50 ವರ್ಷ ತುಂಬಿದ್ದಕ್ಕೆ ಸಂಭ್ರಮ ಪಡುತ್ತಲೇ ಇನ್ನು ಮುಂದೆಯೂ ಕನ್ನಡ, ಕನ್ನಡಿಗ, ಕರ್ನಾಟಕ ಬಗೆಗಿನ ಗೌರವಾಭಿಮಾನ ಹೀಗೆಯೇ ಮುಂದುವರಿಯಲೆಂಬ ಸಂಕಲ್ಪದೊಂದಿಗೆ ಮುಂದಡಿಯಿಡುತ್ತಿದೆ. ವಜ್ರಮಹೋತ್ಸವ, ಅಮೃತಮಹೋತ್ಸವ, ಶತಮಾನೋತ್ಸವಗಳನ್ನೂ ಕಾವೇರಿ ಎದುರುನೋಡುತ್ತಿದೆ. ■